ರ್ಡಿನವರ ಆರೋಪನೆ ಬಗ್ಯೆ ಕಳುಹಿಸಿರುತ್ತಂತ ತಲ್ಪಿದ 4—1—07ನೆ ನಂಬ್ರಂ 6041-8—L. F. 185-06ನೆ ನಂಬರು ಸೆಕ್ರೆಟರಿಯವರ ಡಾಕೆಟ್ ಓದಲಾಗಿ ಸದರಿ ಅಂಶವನ್ನು ನೋಟ್ ಮಾಡಿಕ್ಕೊಂಡು ರಿಕಾರ್ಡ್ ಮಾಡಲಾಯಿತು.

7. ಸ್ಯಾನಿಟೇರ್ಷ ರೂಲ್ಸ್ 100 ಮನೆಗಳಿರತಕ್ಕ ಗ್ರಾಮಗಳಲ್ಲಿ ಮಾತ್ರ ಜಾರಿಯಲ್ಲಿರುತ್ತೆಂತಲೂ 50 ಮನೆಗಳಿರತಕ್ಕ ಗ್ರಾಮಗಳಲ್ಲಿಯೂ ಸದರಿ ರೂಲ್ಸು ಜಾರೀಗೆ ಬಂದಲ್ಲಿ ಸದರಿ ಗ್ರಾಮಗಳು ಉತ್ತಮ ಸ್ಥಿತಿಗೆ ಬರುವದಕ್ಕೆ ಅನುಕೂಲಿಸುತ್ತೆಂತ ಸಹಾ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ 223ನೆ ನಂಬರು ಪ್ರಸ್ತಾಪದ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯದೊಡನೆ ರಿಪೋರ್ಟ್ ಮಾಡಬೇಕೆಂತ ತಲ್ಪಿದ 11—1—07ನೆ ನಂಬ್ರಂ 6233-40—L. F. (190—06)-1ನೆ ನಂಬರ್ ಸೆಕ್ರೆಟರಿಯವರ ಡಾಕೆಟ್ ಓದಲಾಗಿ ಸದರಿ ಅಂಶವನ್ನು ನೋಟ್ ಮಾಡಿಕ್ಕೊಂಡು ರೆಕಾರ್ಡ್ ಮಾಡಿಕೊಂಡಿರುತ್ತೆಂತ ತೀರ್ಮಾನಿಸಲಾಯಿತು.

8. ಮಲೆನಾಡ್ ಗ್ರಾಮಗಳಲ್ಲಿನ ರಸ್ತೆಗಳನ್ನು ಮಾಡತಕ್ಕ ಬಗ್ಯೆ ಕೆಲವು ಹಣಗಳನ್ನು ವದಗಿಸಬೇಕೆಂತ ದಸರಾ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮೆಂಬರುಗಳು ಮಾಡಿದ ಪ್ರಸ್ತಾಪದ ವಿಚಾರದಲ್ಲಿ ಅವಶ್ಯಕವಾದ ನಡವಳಿಕೆ ತಗದುಕೊಳ್ಳಬೇಕೆಂತಲೂ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಅಭಿಪ್ರಾಯವನ್ನು ರಿಪೋರ್ಟ್ ಮಾಡಬೇಕೆಂತಲೂ ಸಹಾ ತಲ್ಪಿದ 11—1—07ನೆ ನಂಬ್ರಂ 6305-7—L. F. (179—06)-1ನೆ ನಂಬರು ಸೆಕ್ರೆಟರಿಯವರ ಡಾಕೆಟ್ ಓದಲಾಗಿ ಇದನ್ನು ನೋಟ್ ಮಾಡಿಕ್ಕೊಂಡಿರಬೇಕೆಂತಲೂ ಇವುಗಳ ಬಗ್ಯೆ ಪ್ರಪೋಜಲಗಳು ಬಂದಾಗ್ಯೆ ಅವುಗಳಿಗೆ ಅವಶ್ಯಕವಾದ ನಿಗಾ ಕೊಡಬೇಕೆಂತಲೂ ಸಹಾ ತೀರ್ಮಾನಿಸಲಾಯಿತು.

9. ಬಹಳ ಜರೂರಾಗಿರೋಣದರಿಂದ ಚಾಲ್ತಿ ಸಾಲಿನಲ್ಲಿಯೇ ನಡಿಯಬೇಕಾಗಿರುವ ಈ ಕೆಳಗೆ ನಮೂದಾಗುವ ಕಾಮುಗಾರಿಗಳ ಬಾಬತು ಅಂದಾಜುಗಳ ಲೀಸ್ಟನ್ನು ಓದಲಾಯಿತು.

	ಮಂಜೂರ್ಮಾಡಿಧೆ. ರೂ.
(1) ಸಖ್ಯಪಟ್ಟಣದ ಮುನಾಫರಖಾನೆಯಬಳಿ ಭಾವಿ ತೆಗಿಯುವದಕ್ಕೋಸ್ಕರ ಅಜಮಾಯಿಷಿ ತರೇಕ ಬರದು ಗುಂಡಿ ತಗಿಯತಕ್ಕ ಬಗ್ಯೆ.	58
(2) ಕೆರೆ ಹೊಸಹಳ್ಳಿ ಭಾವಿಯನ್ನು ಆಳ ಮಾಡುವದಕ್ಕೋಸ್ಕರ ತಯಾರಾಗಿ ಬಂದ ಸುಮ್ಮ ಮೆಂಟಲ್ ಅಂದಾಜಿ.	180
(3) ಕಡೂರು ತಾಲ್ಲೂಕು ಕುರುಬರಹಳ್ಳಿಯಲ್ಲಿ ಬಂದು ಭಾವಿ ತೆಗಿಯತಕ್ಕ ಬಗ್ಯೆ ತಯಾರಾಗಿ ಬಂದ ಸುಮ್ಮ ಮೆಂಬರ್ ಅಂದಾಜಾ.	79
(4) ಚಿಕ್ಕ ತಂಗಲಿಯಲ್ಲಿ ಒಂದು ಭಾವಿ ತೆಗಿಯತಕ್ಕ ಬಗ್ಯೆ ತಯಾರಾಗಿ ಬಂದ ಅಂದಾಜಾ	210
(5) ದಂಟ್ಯಮಕ್ಕಿ-ಹಿರೇಮಗಳೂರು ರಸ್ತೆ ರಿಪೇರಿ ಮಾಡತಕ್ಕ ಬಗ್ಯೆ	60
(6) ಸಖ್ಯಪಟ್ಟಣದ ಹೋಬಳಿ ಅಗ್ರಹಾರದ ಭಾವಿಗೆ ಕಲ್ಲು ಕಾಮುಗಾರಿ ಮಾಡತಕ್ಕ ಬಗ್ಯೆ ತಯಾರಾಗಿ ಬಂದ ಸುಮ್ಮ ಮೆಂಟಲ್ ಅಂದಾಜಾ.	96

10. ಮುಂದಿನ ಡಿಸ್ಟ್ರಿಕ್ಟ್ ಬೋರ್ಡ್ ಮಿಟಿಂಗು 28—2—07ನೆ ಗುರುವಾರ ನಡಿಯತಕ್ಕದ್ದೆಂತ ತೀರ್ಮಾನಿಸಲಾಯಿತು.

ಎಂ. ಲಕ್ಷ್ಮಣಶಾಸ್ತ್ರಿ,
ವೈಸ್ ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 16ನೆ ಮಾರ್ಚಿ 1907.

1907ನೆ ಇಸವಿ ಫೆಬ್ರವರಿ ತಾರೀಖು 14ನೆ ಗುರುವಾರ ನಡದ ಚಿತ್ರದುರ್ಗದ ಡಿಸ್ಟ್ರಿಕ್ಟು ಬೋರ್ಡ್ ಮಿಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

ಮು॥ ರಾ॥ ಎಂ. ಚೆಂಗಪ್ಪ ಶೆಟ್ಟರವರು, ಪ್ರೆಸಿಡೆಂಟ್.

ಅಫಿಷಿಯಲ್ ಮೆಂಬರುಗಳು.

1. ಮೆ॥ ಡಬ್ಬಿಯು. ಶ್ರೀನಿವಾಸೈಯ್ಯಂಗಾರ್ಯವರು, ಡಿಸ್ಟ್ರಿಕ್ಟು ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರು.
2. ,, ಬಿ. ಭೀಮರಾಯರವರು, ವೈಸ್ ಪ್ರೆಸಿಡೆಂಟರು.
3. ,, ಬಿ. ಜೆ. ಕುಮಾರಸ್ವಾಮಿ ಸಾಯಕರವರು, ಜಳ್ಳಕೆರೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರು.
4. ,, ಚಿತ್ರದುರ್ಗದ ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರವರು.
5. ,, ದಾವಣಗೆರೆ ಸಬ್ ಡಿವಿಜ್ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು.

ನ್ಯೂನ್ ಹಾಜರು.

1. ಮೆ॥ ಚಿತ್ರದುರ್ಗದ ಡಿಸ್ಟ್ರಿಕ್ಟು ಸ್ಕೂಲ್ ಡೆಪ್ಯುಟಿ ಇನ್ಸ್ಪೆಕ್ಟರವರು.

ಹಾಜರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮೆ॥ ಖಾಜಿ ಸೈದ್ ಹಸೇನ್‌ಸಾಹೇಬರವರು.
2. ,, ಶಾನುಭೋಗ ಹನುಮಂತಪ್ಪನವರು.
3. ,, ನೇರ್ಲಹಳ್ಳಿ ಸಂಣಪ್ಪನವರು.
4. ,, ಭಾರಿ ಸಂಣಪ್ಪನವರು.
5. ,, ಗೋಪಾಲಯ್ಯನವರು.
6. ,, ನಾಡಿಗ ಸಿದ್ದರಾಮಯ್ಯನವರು.
7. ,, ಖಾಸಿಂಸಾಹೇಬರು.
8. ,, ಲೋಕಿಕೆರೆ ಹನುಮಂತಪ್ಪನವರು.
9. ,, ಬಾಲಕೃಷ್ಣರಾಯರು.
10. ,, ತುಪ್ಪದ ವೀರಣ್ಣನವರು.
11. ,, ಪಾಳೇದಹಳ್ಳಿ ನಾಗಪ್ಪನವರು.
12. ,, ಟಿ. ಸ್ವಾಮಿರಾಯಾಚಾರು.
14. ,, ಪಟೇಲ್ ಕೆಂಚವೀರಪ್ಪನವರು.
15. ,, ಸಿ. ಎಸ್. ಕೃಷ್ಣಪ್ಪನವರು.
16. ,, ಷಡಾಕ್ಷರಪ್ಪನವರು.
17. ,, ನಜೀ ಸಾಹೇಬರು.

ಗೈರ್ ಹಾಜರ್.

1. ಮೆ॥ ಚನ್ನಗಾರಯ್ಯನವರು.
2. ,, ಫಕೀರ್ ಸಾಹೇಬರು.

I. 1906ನೆ ಡಿಸೆಂಬರ್ 17ನೆ ತಾರೀಖಿನಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡು ವಿಾಟಿಂಗಿನ ಪ್ರೊಸೀಡಿಂಗ್ಸು ಕಾಯಿದೆಯನ್ನು ಓದಿ ದೃಢಪಡಿಸಲಾಯಿತು.

II. ಲೋಕಲ್ ಬೋರ್ಡು ರೆಗ್ಯುಲೇಷನ್ ಸೆಕ್ಷನ್ 28 ವ್ಯಾರಾ (1)ನ್ನ ಅನುಸರಿಸಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರು ಮಂಜೂರ್ಮಾಡಿರತಕ್ಕ ಕಾವುಗಾರಿಗಳ ಲೀಸ್ಟನ್ನು ಓದಿ ಅಪ್ರೂವ್ ಮಾಡಲಾಯಿತು.

III. ಫೈನಾನ್ಸು ಕಮಿಟಿಯವರಿಂದ ಸಬ್‌ಮಿಟ್ ಆದ 1907—08ನೆ ಸಾಲಿನ ಜಮಾ ಖರ್ಚು ಬಜೆಟ್ಟನ್ನು ಓದಲಾಯಿತು.

ರಜಲ್ಯೂಷ್ಯ—ಬೋರ್ಡಿನವರು ರಿವೈಜು ಮಾಡಿರುವ ಪ್ರಕಾರ ಖರ್ಚುಬಾಬನ್ನು ಅಂಗೀಕರಿಸಿ ಬಜೆಟ್ ಅಂದಾಜುಗಳನ್ನು ಮಂಜೂರಿ ಬಗ್ಯೆ ಗವರ್ನಮೆಂಟಿಗೆ ಕಳುಹಿಸತಕ್ಕಾಗಿ ತೀರ್ಮಾನಿಸಲಾಯಿತು.

IV. ದಾವಣಗೆರೆ ತಾಲ್ಲೂಕು ಅನಗೋಡು ಗ್ರಾಮದಲ್ಲಿ ಮುಸಾಫರಖಾನೆ ಕಟ್ಟತಕ್ಕ ಬಗ್ಯೆ ತಯಾರಾದ 4,199 ರೂಪಾಯಿನ ಅಂದಾಜನ್ನು ಬಂದಿರತಕ್ಕ ದಾವಣಗೆರೆ ಸಬ್ ಡಿವಿಜ್ ಆಫೀಸರವರ 9—1—07ನೆ ಮುಕ್ತಂ 604ನೆ ನಂಬರ್ ಯಾದಿಯನ್ನು ಓದಲಾಯಿತು.

ರಜಲ್ಯೂಷ್ಯ—ಇದಕ್ಕಾಗಿ ಹಣ ಅನುಕೂಲವಾದ ಕಾಲದಲ್ಲಿ ಪುನಃ ಈ ಅಂಶ ಚರ್ಚೆಸತಕ್ಕದ್ದೆಂತ ತೀರ್ಮಾನಿಸಲಾಯಿತು.

V. ಇದರಡಿ ಕಂಡ ದಸರಾ ರೆಪ್ರೆಸೆಂಟೇಟಿವ್ ಅಸೆಂಬ್ಲಿ ರಪ್ರೆಸೆಂಟೇಷನ್‌ಗಳನ್ನು ಓದಲಾಯಿತು.

(1) ಚಿಕ್ಕಜಾಜೂರಿನಿಂದ ಹಿರಗುಂಟೆನೂರಿಗೆ ರಸ್ತೆ ಹಾಕತಕ್ಕ ವಿಷಯ.
(2) ಹಿರಿಯೂರು-ಧರ್ಮಪುರದ ರಸ್ತೆಯನ್ನು ಮುಗಿಸಿ ಅದರ ನಿಗಾವಣೆ ನೋಡತಕ್ಕ ವಿಷಯ.
(3) ಚಿತ್ರದುರ್ಗದಿಂದ ಗುಂಟನೂರಿಗೆ ರಸ್ತೆ ಹಾಕತಕ್ಕದ್ದು.
(4) ಬಾಗೂರು ವಿಲೇಜ್ ಯೂನಿಯನ್ನಿನಲ್ಲಿ ರಸ್ತೆಗಳಾಗತಕ್ಕ ವಿಷಯ.
(5) ಹೊಳಲ್ಕೆರೆ-ಅನಗೋಡು ರಸ್ತೆಯನ್ನು ಮೆಟಲ್ಡ್ ಮಾಡತಕ್ಕ ವಿಷಯ.

ರಜಲ್ಯೂಷ್ಯ—(1) & (5) ಮತ್ತು ಚಿಕ್ಕಜಾಜೂರಿನಿಂದ ಹಿರೆಗುಂಟನೂರ ವರೆಗೆ ಹಾಲಿ ಇರತಕ್ಕ ಗಾಡಿಗಳು ಓಡ್ಯಾಡುವ ದಾರಿ ಮತ್ತು ಚಿತ್ರದುರ್ಗದಿಂದ ಗುಂಟನೂರವರೆಗೆ ಇರತಕ್ಕ ದಾರಿ ಸಹ ಆಗತಕ್ಕದ್ದು ಅವಶ್ಯಕವಾಗಿರುತ್ತಾಗಿ ತಿಳಿಯಬರುತ್ತಾದ್ದರಿಂದ ಇವುಗಳನ್ನು ಸರ್ವೆ ಲೆವಲ್ ಮಾಡತಕ್ಕ ಬಗ್ಯೆ ಬಜೆಟ್ಟಿನಲ್ಲಿ ಸೇರಿಸಬೇಕೆಂತಲೂ ಮತ್ತು ಹಣ ಪದಗಿದಾಗ ಬಾಗೂರು ಯೂನಿಯನ್ನಿನಲ್ಲಿ ರಸ್ತೆ ಹಾಕತಕ್ಕ ಅಂಶ ಯೋಚಿಸತಕ್ಕದ್ದೆಂತಲೂ ಮತ್ತು ಹಿರಿಯೂರು-ಧರ್ಮಪುರದ ರಸ್ತೆ ಮೆಟಲ್ಡ್ ಮಾಡತಕ್ಕದ್ದು ಸದ್ಯಕ್ಕೆ ನಿಲ್ಲಿಸಬೇಕೆಂತಲೂ ಸಹ ತೀರ್ಮಾನಿಸಲಾಯಿತು.

VI. ಹೊಸದುರ್ಗದಿಂದ ಮತ್ತೋಡು ವರೆಗೆ ರಸ್ತೆ ಹಾಕತಕ್ಕ ವಿಚಾರದಲ್ಲಿ ಹೊಸದುರ್ಗದ ತಾಲ್ಲೂಕು ಬೋರ್ಡಿನಿಂದ ತಲ್ಪಿರತಕ್ಕ ರಜಲ್ಯೂರ್ಷ ಓದಲಾಯಿತು.

ರಜಲ್ಯೂರ್ಷ—ತಾತ್ಕಾಲಕ್ಕೆ ಹಣವಿಲ್ಲ.

VII. ಹದಡಿಯಿಂದ ಸೂಳೆಕೆರೆ ವರಿಗೆ ರಸ್ತೆ ಹಾಕತಕ್ಕ ವಿಚಾರದಲ್ಲಿ ದಾವಣಗೆರೆ ತಾಲ್ಲೂಕು ಅಮಲ್ದಾರ್ರಿಂದ ತಲ್ಪಿದ 16—1—07ನೆ ಮಾರ್ಕ್ಕಂ 96ನೆ ನಂಬರ್ ರಿಪೋರ್ಟನ್ನು ಓದಲಾಯಿತು.

ರಜಲ್ಯೂರ್ಷ—ಹಾಲಿ ನಡಿಯುತ್ತಿರುವ ಹದಡಿಕೆರೆ ಏರಿ ಬಡಾವಣೆ ಕೆಲಸ ಪೂರೈಸಿದ ನಂತರ ಮೇಲ್ಕಂಡ ರಸ್ತೆ ಹಾಕತಕ್ಕ ಅಂಶ ಬೋರ್ಡಿನವರು ಆಲೋಚನತಕ್ಕ ದ್ದಾಗಿರುತ್ತಾ ಗಿ ತೀರ್ಮಾನಿಸಲಾಯಿತು.

VIII. ಬದರಿಕೆರೆ-ಹೊಸದುರ್ಗ ರೋಡು ಮತ್ತು ಭರಮಗಿರಿ-ಹೊಸದುರ್ಗ ರೋಡುಗಳನ್ನು ಮೆಟ್ಟೀನು ಮಾಡತಕ್ಕ ಬಗ್ಗೆ ತಗಲುವ ಲಾಗವಡನ್ನು ಪ್ರೊವಿಷಿಯಲ್ ಫಂಡಿಗೆ ವರ್ಗಾಯಿಸತಕ್ಕ ವಿಷಯದಲ್ಲಿ ಹೊಸದುರ್ಗ ತಾಲ್ಲೂಕು ಬೋರ್ಡಿನ 28—12—06ನೆ ಮಾರ್ಕ್ಕಂನ ರಜಲ್ಯೂರ್ಷ ಓದಲಾಯಿತು.

ರಜಲ್ಯೂರ್ಷ—ಬೋರ್ಡಿನವರು ಈ ವಿಷಯದಲ್ಲಿ 1903ನೆ ಇಸವಿಯಲ್ಲಿ ಗಾರ್ನವೆಂಟಿಗೆ ರೆಪ್ರೆಸೆಂಟ್ ಮಾಡಲಾಗಿ ಬರ ಗಿರಿ-ಹೊಸದುರ್ಗ ರಸ್ತೆ ಸ್ಪೆಷಲ್ ರಿಪೇರ್ಗೋಸ್ಕರ ಲೋಕಲ್ ಫಂಡ್ಸು ಜನರಲ್‌ನಿಂದ 5,088 ರೂಪಾಯಿಯನ್ನು ಮತ್ತು ಸದರಿ ರೋಡುಗಳನ್ನು ಮೆಟ್ಟೀನು ಮಾಡಿಕೊಳ್ಳತಕ್ಕ ಬಗ್ಗೆ ವರುಷಕ್ಕೆ 1,310 ರೂಪಾಯಿನಂತೆ 2 ವರುಷದ ವರೆಗೆ ಮೇಲ್ಕಂಡ ಫಂಡಿನಿಂದಲೆ (Grant-in-aid) ಗ್ರಾಂಟ್-ಇನ್-ಏಡ್ ಮಂಜೂರ್ಮಾಡಿದ್ದರಿಂತಲೂ ತಿಳಿಯಬರುತ್ತೆ. ಈ ವಿಷಯದಲ್ಲಿ ತಾಲ್ಲೂಕು ಬೋರ್ಡಿನವರು ಮಾಡಿರತಕ್ಕ ರಜಲ್ಯೂರ್ಷ ನ್ಯಾಯವಾಗಿರುತ್ತಾ ಗಿ ಇದನ್ನು ಗಾರ್ನವೆಂಟಿನವರ ಸಮ್ಮುಖಾವಲೋಕನೆ ಬಗ್ಗೆ ಕಳುಹಿಸಪೇಕಾಗಿ ತೀರ್ಮಾನಿಸಲಾಯಿತು.

IX. ಹದಡಿಕೆರೆ ಏರಿಯ ಬಡಾವಣೆಗೋಸ್ಕರ ಜಾಸ್ತಿ ತಗಲುವ 1,240 ರೂಪಾಯಿ ಲಾಗೋಡು ವಿಚಾರದಲ್ಲಿ ಬೋರ್ಡಿನವರ ಅಭಿಪ್ರಾಯದ ಬಗ್ಗೆ ಬಂದಿರತಕ್ಕ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ 2—12—06 ಮಾರ್ಕ್ಕಂ 981ನೆ ನಂಬರ್ ಡಾಕಟ್ ಓದಲಾಯಿತು.

ರಜಲ್ಯೂರ್ಷ—ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರು ಪ್ರೊಪೋಜ್ ಮಾಡುವ ಮೇರಿಗೆ ಕೈಪಿಡಿಗೋಡೆ ಕಟ್ಟು ತಕ್ಕದ್ದು. ಅವಶ್ಯಕವಾಗಿ ಕಂಡುಬರುತ್ತಾದ್ದರಿಂದ ಇದನ್ನು ಬಜ್ಜಟ್ಟಿನಲ್ಲಿ ಪ್ರೊವೈಡ್ ಮಾಡಪೇಕಾಗಿ ತೀರ್ಮಾನಿಸಲಾಯಿತು.

X. ಐಮಂಗಲದಿಂದ ಯರಬಳ್ಳಿ ವರೆಗೆ ರಸ್ತೆ ಹಾಕತಕ್ಕ ಬಗ್ಗೆ ತಯಾರಾದ 250 ರೂಪಾಯಿ ಅಂದಾಜನಿಕೆ ತಲ್ಪಿರತಕ್ಕ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರ 1—1—07ನೆ ಮಾರ್ಕ್ಕಂ 6ನೆ ನಂಬರ್ ಡಾಕೆಟನ್ನು ಓದಲಾಯಿತು.

ರಜಲ್ಯೂರ್ಷ—ಹಣ ವದಗಿದಾಗ್ಯೆ ಈ ಕೆಲಸ ಮಾಡತಕ್ಕದ್ದೆಂತ ತೀರ್ಮಾನಿಸಲಾಯಿತು.

XI. ಹಿರಿಯೂರು ತಾಲ್ಲೂಕು ಆದಿವಾಳ ಗ್ರಾಮದಲ್ಲಿ ಹಂಗಾಮಿಯಾಗಿ ಎರಡು ವರುಷಗಳ ವರಿಗೆ ಸಂತೆ ಆಗತಕ್ಕದ್ದನ್ನು ಮಂಜೂರ್ಮಾಡಿರುವದಾಗಿ ಗಾರ್ನವೆಂಟಿನಿಂದ ತಲ್ಪಿರತಕ್ಕ 4—1—07ನೆ ಮಾರ್ಕ್ಕಂ 6037-40—L. F. (291—06)-2ನೆ ನಂಬರ್ ಪ್ರೊಸೀಡಿಂಗ್ಸನ್ನು ಓದಿ ರೆಕಾರ್ಡು ಮಾಡಲಾಯಿತು.

XII. ಮುಂದಿನ ಮೀಟಿಂಗು 1907ನೆ ಮೇ ಮಾಹೆ 29ನೆ ತಾರೀಖಿನ ದಿವಸ ನಡಿಯಬೇಕಾಗಿ ತೀರ್ಮಾನಿಸಲಾಯಿತು.

ಎಂ. ಚಂಗೈಯ್ಯಶೆಟ್ಟಿ,
ಪ್ರೆಸಿಡೆಂಟ್.

ಬೆಂಗಳೂರು ಸಬ್ ಜಡ್ಜ್ರವರ ಕೋರ್ಟಿನಲ್ಲಿ.

ಸ್ರ 1906—07ನೆ ಇಸವಿ ಮಿಸ್ ಅರ್ಜೀ ನಂಬರು 577.

ಅರ್ಜೀದಾರ್ ಕೋಲಾರ ಗಣಿಯಲ್ಲಿ ಮಾರಿಕೊಪ್ಪಂ ಕ್ಯಾಂಪಿನಲ್ಲಿರುವ ಸಿ. ಅರುಣಾಚಲ ಮೊದಲಿಯಾರ್, ಮೈನರಾದ ದೊಡ್ಡ ಬಳ್ಳಾಪುರದ ಸ್ಥಳದ 1ನೆ ಜೆಲ್ಲರಾಯಂ, 2ನೆ ಅಕೋಧವ್ಮ ಮತ್ತು ಕಮಲವ್ಮನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಜೆಲ್ಲರಾಯಂ, ಅಕೋಧವ್ಮ, ಕಮಲವ್ಮನಿಗೆ ಚಿಕ್ಕಪ್ಪ ಆಗಬೇಕೆಂಬ ಹಕ್ಕಿನಮೇಲೆ ಕೋಲಾರ ಗಣಿ ಮಾರಿಕೊಪ್ಪಂ ಸ್ಥಳದ ಸಿ. ಅರುಣಾಚಲ ಮೊದಲಿಯಾರ್ರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸ್ರ 1907ನೆ ಇಸವಿ ಮೇ ತಾರೀಖು 31ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣವಾಗಿದೆ.

ಸ್ರ 1907ನೆ ಇಸವಿ ಏಪ್ರಲ್ ತಿಂಗಳು 3ನೆ ತಾರೀಖಿನಲ್ಲಿ ಕೊರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣವಾಗಿದೆ.

ಸ್ರ 1906—1907ನೆ ಇಸವಿ ಮಿಸ್ ಅರ್ಜೀ ನಂಬರ್ 588.

ಅರ್ಜಿದಾರರು ಬೆಂಗಳೂರು ಜಂಖಾನಪೇಟೆಯಲ್ಲಿರುವ ಬುದ್ದಿವೆನ್ನಾ ರಘುನಾತಪ್ಪ, 2ನೆ ಈತನ ಸೊಸೆ ಲಕ್ಷ್ಮಮ್ಮ, ಮೈನರಾದ ಬೆಂಗಳೂರು ಜಂಖಾನಪೇಟೆ ಸ್ಥಳದ ದಶರಥರಾವಯ್ಯನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ದಶರಥರಾವಯ್ಯನಿಗೆ 1ನೆ ಅರ್ಜಿದಾರ ತಾತ ಮತ್ತು 2ನೆ ಅರ್ಜಿದಾರಳು ತಾಯಿ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರು ಜಂಖಾನಪೇಟೆ ಸ್ಥಳದ ರಘುನಾತಪ್ಪ ಮತ್ತು ಲಕ್ಷ್ಮಮ್ಮನು ಸದರಿ ಮೈನರಿನ ಆಸ್ತಿ ಕಾಪಾಡುವದಕ್ಕೆ